**<u>ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸೇಡಂ</u>**

**CC No. 188/2024**

**(ಇಂದು ದಿಃ 10-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

| ಹೆಸರು ಶ್ರೀ/ಶ್ರೀಮತಿ | ಅನೀಲ | CW-1 | PW-4 |
|---|---|---|---|
| ತಂದೆ/ಗಂಡನ ಹೆಸರು | ಲಕ್ಷ್ಮಣ ರಾಠೋಡ್ | | |
| ವಯಸ್ಸು | 26 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಕೋಲಕುಂದಾ, ತಾಃ ಸೆಡೇಂ | | |

ಚಾಸಾ-4 ನನ್ನ ತಂದೆ ಈಗ 3 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಚಾಸಾ-5 ಮತ್ತು 6 ರವರ ಪರಿಚಯ ಇರುತ್ತದೆ. ಆರೋಪಿಗಳ ಪರಿಚಯ ಇದೆ. ದಿನಾಂಕ 25.03.2023 ರಂದು ಸಾಯಂಕಾಲ 06.00 ರಿಂದ 07.00 ಗಂಟೆ ಸುಮಾರಿಗೆ ನಮ್ಮ ಊರಿನ ಸೇವಾಲಾಲ್ ಗುಡಿಯ ಮುಂದೆ ಜಗಳವಾಗಿರುತ್ತದೆ. ಆರೋಪಿಗಳು ಅವರ ಆಕಳನ್ನು ನಮ್ಮ ಜಮೀನಿನಲ್ಲಿ ಬಿಟ್ಟಿದ್ದರಿಂದ ನಾನು ಯಾಕೆ ನಮ್ಮ ಜಮೀನಿನಲ್ಲಿ ನಿಮ್ಮ ಆಕಾಳನುನ ಬೀಡುತ್ತಿರಿ ಎಂದು ಕೂಗಾಡಿದ್ದು ಆ ಕಾರಣದಿಂದ ಅವರು ಆ ದಿನ ನನ್ನ ಜೊತೆ ಜಗಳ ತೆಗೆದು ಆರೋಪಿಗಳೆಲ್ಲರು ನನಗೆ ಬಡಿಗೆಯಿಂದ ನನ್ನ ತಲೆಗೆ ಮತ್ತು ಮೈ ಕೈ ಗೆ ಹೋಡೆದಿರುತ್ತಾರೆ. ಆಗ ನನ್ನ ತಂದೆ ಅಲ್ಲಿಗೆ ಬಂದಿದ್ದು ಅವರಿಗೂ ಸಹ ಬಡಿಗೆಯಿಂದ ಎಡಗೈಗೆ ಮತ್ತು ಮೈ ಕೈಗೆ ಹೋಡೆದಿರುತ್ತಾರೆ. ಚಾಸಾ-5 ಮತ್ತು 6 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಖಾಸಗಿ ವಾಹನದಲ್ಲಿ ಮುದೋಳ್ ಸರಕಾರಿ ಆಸ್ಪತ್ರೆಗೆ ಹೋಗಿದ್ದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಸೇಡಂ ಸರಕಾರಿ ಆಸ್ಪತ್ರೆಗೆ ಬಂದಿರುತ್ತೇವೆ . ಈ ಬಗ್ಗೆ ನಾನು ಸರಕಾರಿ ಆಸ್ಪತ್ರೆಯಲ್ಲಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬೇಟಿ ನೀಡಿ ಮಹಜರ್ ಮಾಡಿ 3 ಬಡಿಗೆಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ

ಬಡಿಗೆಗಣಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಬಡಿಗೆಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಬಡಿಗೆಗಳನ್ನು ಈಗಾಗಲೇ ಮು. ಮಾ. 1 ರಿಂದ 3 ಎಂದು ಗುರುತಿಸಲಾಗಿರುತ್ತದೆ.

**(ಈ ಹಂತದಲ್ಲಿ ಸ.ಸ.ಅ. ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ದಿಃ 25-03-2023 ರಂದು ನಮ್ಮ ತಾಂಡದ ಸೇವಾಲಾಲ್ ಗುಡಿಯ ಹತ್ತಿರ ಕ್ರೀಕೆಟ್ ಆಡುತ್ತಿರುವಾಗ ಪಾಂಡ್ಯಾನ ಹಿರಿಯ ಮಗ ಗೋವಿಂದ ಇತನಿಗೆ ಬಾಲ್ ಆಕಸ್ಮಿಕವಾಗಿ ಬಡಿದ್ದರಿಂದ ಆತನೊಂದಿಗೆ ಬಾಯಿ ಮಾತಿನ ತಕರಾರು ಮಾಡಿದ್ದರಿಂದ ಸದರಿ ವಿಷಯವನ್ನು ಮನೆಗೆ ಹೋಗಿ ನಮ್ಮ ತಂದೆಗೆ ತಿಳಿಸಿದ್ದೆ ಎಂದರೆ ಸರಿ. ನಂತರ ನನ್ನ ತಂದೆ ಹಾಗೂ ನಾನು ಆರೋಪಿಗಳ ಮನೆಗೆ ಹೋಗಿ ಯಾಕೆ ತಕರಾರು ಮಾಡಿತ್ತಿದಿಯಾ ಎಂದು ಕೇಳಿದಕ್ಕೆ ಆರೋಪಿಗಳೆಲ್ಲರು ಅಕ್ರಮ ಕೂಟ ಕಟ್ಟಿಕೊಂಡು ಕೈಯಲ್ಲಿ ಬಡಿಗೆ ಹಿಡಿದುಕೊಂಡು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಗೋವಿಂದ ಬಡಿಗೆಯಿಂದ ನನ್ನ ಹಿಂದುಗಡೆ ತಲೆಗೆ ಹೊಡೆದಿರುತ್ತಾನೆ ಎಂದರೆ ಸರಿ. ಲೊಕೇಶ ಬಡಿಗೆಯಿಂದ ನನ್ನ ಬಲಗೈ ಮೊಣಕೈಗೆ ಹೋಡೆದಿರುತ್ತಾನೆ ಎಂದರೆ ಸರಿ. ಕಿರು ಬಡಿಗೆಯಿಂದ ನನ್ನ ಎಡಗೈ ಮುಂಗೈ ಹತ್ತಿರ ಮತ್ತು ಎಡಗೈ ರಟೆಗೆ ಹೋಡೆದು ಗಾಯಪಡಿಸಿರುತ್ತಾನೆ ಎಂದರೆ ಸರಿ. ನನ್ನ ತಂದೆ ಬಿಡಿಸಲು ಬಂದಾಗ ಪಾಂಡು ತನ್ನ ಕೈಯಲ್ಲಿದ್ದ ಬಡಿಗೆಯಿಂದ ನನ್ನ ತಂದೆಯ ಎಡಗೈ , ಎಡಗೈ ತೊರುಬೆರಳಿಗೆ ಹಾಗೂ ಮದ್ಯದ ಬೆರಳಿಗೆ ಹೋಡೆದಿರುತ್ತಾನೆ ಎಂದರೆ ಸರಿ. 5ನೇ ಆರೋಪಿ ಕೈಯಿಂದ ನನ್ನ ಎದೆಯ ಮೇಲಿನ ಶರ್ಟ ಹಿಡಿದು ಎಳೆದಾಡಿ ಮೈ ಕೈಗೆ ಹೋಡೆದಿರುತ್ತಾಳೆ ಎಂದರೆ ಸರಿ. ಆರೋಪಿಗಳು ಎಲ್ಲರು ನಮಗೆ ಜೀವ ಬೇದರಿಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿರಗಳ ಪರ ಶ್ರೀ SRH ವಕೀಲರಿಂದಃ**

ದಿನಾಂಕ 25.03.2023 ರಂದು ಗಲಾಟೆ ಆಗಿರುತ್ತದೆ. ಸೇವಲಾಲ್ ಗುಡಿಯ ಹತ್ತಿರ ಸಾಕಷ್ಟು ಜನರು ಕುಳಿತಿರುತ್ತಾರೆ ಎಂದರೆ ಸರಿ. ಆರೋಪಿಗಳು ನಮ್ಮ ಜಮೀನಿನಲ್ಲಿ ಆಕಳು ಬಿಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.1 ನೇ ಆರೋಪಿ ನನ್ನ

ತಲೆಯ ಿಮೇಲೆ ಬಡಿಗೆಯಿಂದ ಹೋಡೆದಿರುತ್ತಾನೆ. 2ನೇ ಆರೋಪಿ ನನ್ನ ಕೈ ಮತ್ತು ಕಾಲಿಗೆ ಬಡಿಗೆಯಿಂದ ಹೋಡೆದಿರುತ್ತಾನೆ. 3ನೇ ಆರೋಪಿ ನನ್ನ ಎಡ ಬುಜಕ್ಕೆ ಕೈಯಿಂದ ಹೋಡೆದಿರುತ್ತಾನೆ. ಈಗ ನ್ಯಾಯಾಲಯದ ಮುಂದೆ ಇರುವಂತಹ ಬಡಿಗೆಗಳು ಎಲ್ಲಾ ಕಡೆಗಳಲ್ಲಿ ಸಿಗುತ್ತವೆ ಎಂದರೆ ಸರಿ. ಆರೋಪಿಗಳು ನನ್ನ ಜೊತೆ ಜಗಳ ತೆಗೆದು ಬಡಿಗೆಯಿಂದ ಹೋಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಮಗೂ ಮತ್ತು ಆರೋಪಿಗಳಿಗೂ ಮೊದಲಿನಿಂದಲೂ ಸರಿ ಇರದೇ ಇರುವುದರಿಂದ ಅವರ ವಿರುದ್ದ ಸುಳ್ಳು ದೂರನ್ನು ದಾಖಲುಪಡಿಸಿರುತ್ತೇನೆ ಎಂದರೆ ಸರಿಯಲ್ಲ, ನಾನು ಹೇಳಿದಂತೆ ಪೊಲೀಸರು ನನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ. ಆರೋಪಿಗಳು ನನಗೂ ಮತ್ತು ನನ್ನ ತಂದೆಗೆ ಹೋಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಆರೋಪಿಗಳು ಅಕ್ರಮ ಕೂಟ ಕಟ್ಟಿಕೊಂಡು ಬಂದಿದ್ದರಿಂದ ಬಡಿಗೆಯಿಂದ ಹೋಡೆದಿರುವುದಿಲ್ಲ , ಅವಾಚ್ಯ ಶಬ್ದಗಳಿಂದೆ ಬೈದಿರುವುದಿಲ್ಲ ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ,**
**ಸೇಡಂ.**